
## ಭಿಕ್ಷುಕರಿಗೂ ಸಮವಸ್ತ್ರ

ಇದು ಗುಜರಾತ್ ಪ್ರವಾಸದಲ್ಲಿ ಕಂಡು ಬಂದ ದೃಶ್ಯ. ಸಮವಸ್ತ್ರ ಧರಿಸಿ, ಶಿಸ್ತಿನಿಂದ ಸಾಲಾಗಿ ಕುಳಿತಿರುವ ಭಿಕ್ಷುಕರು. ಭಿಕ್ಷೆಗೆ ಪೈಪೋಟಿ ಇಲ್ಲ. ಕಾಡಿ ಬೇಡುವುದಿಲ್ಲ. ಇವರಲ್ಲಿ ಮುಖ್ಯಸ್ಥನೊಬ್ಬನಿದ್ದು ಆ ದಿನ ಬಂದದ್ದನ್ನೆಲ್ಲಾ ಸಮವಾಗಿ ಹಂಚಿಕೊಳ್ಳುತ್ತಾರೆಂದು ಭೇಟಿಯ ಸಮಯದಲ್ಲಿ ತಿಳಿದು ಬಂತು.

**-ಕೆ.ಎನ್.ಪ್ರಭಾಕರ ಗುಪ್ತ, ಹಾಸನ**



## ಕಲ್ಲು ಜಾಲರಿಯ ವಿಸ್ಮಯ ಕೊಳ



ಕಲ್ಲು, ಕಲ್ಲು ಕಥೆ ಹೇಳುವ ಚಿತ್ರದುರ್ಗದಲ್ಲಿ ಪಾಳೆಗಾರರ ಕಾಲದಲ್ಲಿ ನೀರಿಗಾಗಿ ನಿರ್ಮಿಸಿದ ಕೊಳಗಳು ನೂರಾರು (ಪುಷ್ಕರಣಿ, ಹೊಂಡ) ಇವೆ. ಅದರಲ್ಲೊಂದು ತಿಳಿ ನೀರಿನಿಂದ ಕೂಡಿದ ಕೊಳ, ಶ್ರೀ ಕರಿವರ್ತೇಶ್ವರ ದೇವಸ್ಥಾನದ ಮುಂದೆ ಇದೆ. ಈ ದೇವಾಲಯದಲ್ಲಿ ಈಶ್ವರ ಲಿಂಗ, ಮುಂದುಗಡೆ ಬಸವ ವಿಗ್ರಹ, ನಾಲ್ಕು ಸುಂದರ ಕಂಬಗಳಿದ್ದು, ಕಂಬಗಳ ಮೇಲೆಲ್ಲ ಚಿತ್ತಾರಗಳನ್ನು ಬಿಡಿಸಲಾಗಿದೆ. ಆಲಯದ ಮುಂದೆ ಕೇವಲ ಮೂರು ಅಡಿ ಅಂತರದಲ್ಲಿ ಕೊಳವಿದೆ. ಇದರ ಆಳ ಎಂಟು ಆಳು ಮಟ್ಟ (ಸುಮಾರು 50 ಅಡಿ)ವಿದ್ದು, ಸುತ್ತ ಪಾವಟಿಕೆಗಳಿವೆ. ನಾಲ್ಕು ಮೂಲೆಗಳಿಂದ ಅಡ್ಡತೂರೆ ಹಾಕಿದ್ದಾರೆ, ಉದ್ದ ತೊಲೆಗಳಿಲ್ಲ. ಇದೊಂದು ವಿಚಿತ್ರ ರಚನೆಯ ಕೊಳವಾಗಿದೆ.

ಈ ಆಲಯಕ್ಕೆ ಪಾಳೆಗಾರರು ಆಗಾಗ ಭೇಟಿ ಕೊಟ್ಟು ತಿಳಿನೀರಿನಲ್ಲಿ ಆಡಿ ಸಂತೋಷಪಡುತ್ತಿದ್ದರು ಎಂದು ಸಂಶೋಧಕರು ಹೇಳುತ್ತಾರೆ. ಈ ದೇವಾಲಯ ಮೂರನೇ ಸುತ್ತಿನ ಕಾಮನ ಬಾಗಿಲಿನ ಆನತಿ ದೂರದಲ್ಲಿದೆ.

**-ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**

## ಕದಳಿ ಹನುಮನ ನೋಡಿದಿರಾ!

ಪೂಜೆಗೆ ತಂದಿದ್ದ ಬಾಳೆಹಣ್ಣುಗಳಿಂದಲೇ ವೀರ ಹನುಮನಿಗೆ ಅಲಂಕಾರ ಮಾಡಿ ಕದಳಿ ಹನುಮನನ್ನೇ ಸೃಷ್ಟಿಸಿ ಬಿಟ್ಟಿದ್ದಾರೆ ಅರ್ಚಕ ಮಹಾಶಯರು. ದೇವರ ವಿಗ್ರಹಗಳನ್ನು ಅಲಂಕರಿಸುವುದೇ ನೈಪುಣ್ಯದ ಕೆಲಸ. ಹೂವಿನ ಅಲಂಕಾರದ ಜೊತೆಯಲ್ಲಿ ಹಣ್ಣುಗಳ ಅಲಂಕಾರವು ಒಂದು ಕಲಾಕೃತಿಯಾಗಿ ಪರಿಣಮಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಬಾಳೇಹಣ್ಣುಗಳಿಂದಲೇ ಹನುಮನ ವಿಗ್ರಹಕ್ಕೆ ಮೆರುಗು ನೀಡಿದ ಅರ್ಚಕರು ಉತ್ತಮ ಕಲಾಕಾರರಾಗಿರುವುದಂತೂ ನಿಜ.

**-ಹೆಚ್.ಶಿವಣ್ಣ ತುಪ್ಪದಮನೆ**

